

# ಗಂಡಸರು ಹೆಂಗಸರನ್ನು ಹುಡುಕಿಕೊಂಡು

■ ಎಚ್‌.ಆರ್‌. ರಮೇಶ
ಕಲೆ: ಎಸ್‌.ವಿ. ಹೂಗಾರ



ಅಲ್ಲೊಂದು ಹೆಣ್ಣಿನ ಆಕೃತಿ ಕುಳಿತಿದೆ.

ನಿಮ್ಮ ಕಲ್ಪನೆಗೆ ಬಿಟ್ಟಿದ್ದು ಅವಳು ಅಲ್ಲಿ ಕುಳಿತಿದ್ದಾಳೆ ಎನ್ನುವುದು. ಅವಳು ತುಂಬಾ ದೂರದಲ್ಲಿ ಕುಳಿತಿದ್ದಾಳೆ. ಅವಳನ್ನು ಸ್ಪಷ್ಟವಾಗಿ ಕಾಣುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವಳು ನಿಮ್ಮ ಕಣ್ಣುಗಳು ಸ್ಪಷ್ಟವಾಗಿ ಕಾಣುವಷ್ಟು ಹತ್ತಿರದಲ್ಲಿ ಕುಳಿತಿಲ್ಲ. ಛತ್ರಿ ಹಿಡಿದುಕೊಂಡಿದ್ದಾಳೆ. ನಸುಗೆಂಪು ಹೂವಿನ ಚಿತ್ರಗಳು ಅದರ ಮೇಲೆ ನಿಜದಂತೆ ಅರಳಿ ನಳನಳಿಸುವಂತೆ ಕಾಣುತ್ತಿವೆ. ತೊಟ್ಟಿರುವ ವಸ್ತ್ರದ ಬಣ್ಣ ಹಳದಿ, ಹಸಿರು, ಆಕಾಶ ನೀಲಿ ಒಂದರೊಳಗೊಂದು ಬೆರೆತುಹೋಗಿವೆ. ಯಾವುದು ಯಾವ ಯಾವ ಬಣ್ಣವೆಂದೂ ಸಹ ಗುರುತಿಸಲು ಆಗುವುದಿಲ್ಲ. ಹಾಗೂ ಅವಳು ದೂರದಲ್ಲಿ ಕುಳಿತುಕೊಂಡಿರುವುದರಿಂದ ಛತ್ರಿಯ ಮೇಲಿನ ಹೂವುಗಳು ಯಾವುವು ಎಂದು ಹೇಳಲು ಆಗುವುದಿಲ್ಲ. ಆದರೆ ಅವು ಛತ್ರಿಯೇ ನೆಲವೆಂದು ಅರಳಿ ನಗುತ್ತಿವೆ. ಇದನ್ನು ದೂರದಿಂದಲೇ ಕಾಣಬಹುದು. ಅವಳು ತಾನು ಹಿಡಿದಿರುವ ಛತ್ರಿಯನ್ನು ಸ್ವಲ್ಪ ಎಡಕ್ಕೆ ಬಾಗಿಸಿಕೊಂಡಳು. ಸಹಸ್ರ ವರ್ಷಗಳಿಂದ ನೀರಿನಿಂದ ಸವೆಯಲ್ಪಟ್ಟ ನುಣುಪು ಬೆಣಚುಕಲ್ಲು ಬೆನ್ನು. ಕುತ್ತಿಗೆಯ ಕೆಳಭಾಗದ ಬೆನ್ನು ಕಾಣುತ್ತಿದೆ ಹಾಗೆ. ಬೆನ್ನಿನ ಮೇಲೆ ಅಚ್ಚೆ. ಅಥವಾ ಅದು ಮಚ್ಚೆ. ದೂರದಲ್ಲಿ ಕುಳಿಕೊಂಡಿರುವುದರಿಂದ ನಿಖರವಾಗಿ ಹೇಳಲು ಆಗದು. ಮರದ ಎಲೆಯೂ ಆಗಿರಬಹುದು. ಆದರೆ ಛತ್ರಿ ಹಿಡಿದು ಕುಳಿತಿರುವಾಗ ಎಲೆ ಇಲ್ಲಿಂದ ಬೀಳಬೇಕು. ಅಲ್ಲದೆ ಅವಳು ಮರದ ಅಡಿಯಲ್ಲೇನು ಕುಳಿತಿಲ್ಲ. ಎಲೆ ಬಂದು ಅಲ್ಲಿ ಬೀಳಲು ಮರದ ಅಡಿಯಲ್ಲೇ ಕುಳಿತುಕೊಳ್ಳಬೇಕಿಲ್ಲ. ನಿಮಗೂ ಗೊತ್ತು. ಗಾಳಿ ಎನ್ನುವುದೊಂದು ಇದೆಯಲ್ಲ ಇಲ್ಲಿ. ಹಾಗಾಗಿ ಛತ್ರಿ ಹಿಡಿದು ಕುಳಿತಿರುವಾಗ ಎಲೆ ಎಲ್ಲಿಂದ ಬೀಳುತ್ತೆ ಎನ್ನುವ ಸಹಜ ಪ್ರಶ್ನೆಗೆ ಉತ್ತರ ಅದು ಮೊದಲೇ ಬಿದ್ದಿರಬಹುದು. ಅದು ಬಿದ್ದಿದ್ದು ಅವಳಿಗೆ ಅರಿವಿಲ್ಲದಿರಬಹುದು. ಅಥವಾ ಮರದಲ್ಲಿ ಇದ್ದ ಎಲೆ ಮರಕ್ಕೆ ಹಣ್ಣು ಕೊಟ್ಟ ಎಲೆ, ಮರಕ್ಕೆ ಹೂವನ್ನು ನಗಿಸಿದ ಎಲೆ, ಮರವನ್ನು ಮರವಾಗಿಸಿದ ಎಲೆ, ಅಥವಾ ಗಿಡವನ್ನು ಬೆಳೆಸಿದ ಎಲೆ, ಮರಕ್ಕೆ ಉಣ್ಣಿಸಿದ ಎಲೆ, ಆಕಾಶಕ್ಕೆ ರೂಪವನ್ನು ಕೊಟ್ಟ ಎಲೆ, ಪಕ್ಷಿಗಳಿಗೆ ಹಾಡುಗಳನ್ನು ಕೊಟ್ಟ ಎಲೆ, ಗಾಳಿಗೆ ಅಸ್ತಿತ್ವವನ್ನು ಕೊಟ್ಟ ಎಲೆ, ಮಳೆಗೆ ನೆಲೆಯನ್ನು ಕಲ್ಪಿಸಿದ ಎಲೆ. ಅಂತಹ ಎಲೆಯನ್ನು ಮತ್ತು ಕಾಲವನ್ನು ಅಳೆದ ಎಲೆ, ಬದುಕನ್ನು ಸಪ್ಪಳವಿಲ್ಲದೆ ಉದುರಿಸಿದ ಎಲೆ, ಇಂತಹದನ್ನು ಅವಳು ತನ್ನ ಭುಜದಿಂದ ಹೇಗೆ ಕೊಡವಿ ಆಚೆ ತಳ್ಳಬಹುದು, ಇಲ್ಲ, ಅವಳು ಅದನ್ನು ಆಚೆ ಕೊಡವಿಕೊಳ್ಳಲಾರಳು. ಛತ್ರಿ ಅಡ್ಡವಿದ್ದುದ್ದರಿಂದ ಸೂರ್ಯ ಕಾಣುತ್ತಿರಲಿಲ್ಲ. ಈಗ ಸೂರ್ಯ ಕಾಣುತ್ತಿದ್ದಾನೆ. ಆದರೆ ಮುಳುಗುತ್ತಿದ್ದಾನೆ. ಅವನಿಗೂ ನಿತ್ಯ ಬಣ್ಣಬಣ್ಣವಾಗಿ ಮಿಂದು ಮುಳುಗಿ ಬೇಸರವಾಗಿ, ಯಾವ ಪ್ರಭೆಯಿಲ್ಲದೆ, ಬಣ್ಣವಿಲ್ಲದೆ ಸಾದಾಸೀದವಾಗಿ ಮುಳುಗುತ್ತಿದ್ದಾನೆ. ದಿಗಂತದಲ್ಲಿ ಹಾಲುಗಲ್ಲದ ಕೈಗಳು ತಮಗೆ ಸಿಕ್ಕ ಕಾಗದವನ್ನು ಹರಿದ ಚೂರುಗಳಂತಿರುವ ಮೋಡಗಳಂತಹ ಭಿತ್ತಿಗಳು ಯಾವುದೂ ಇಲ್ಲ. ಅವಳು ಛತ್ರಿಯನ್ನು